ರಾಜ್ಯದ ಖಾದಿ ಮತ್ತು ಗ್ರಾಮೋದ್ಯೋಗ ವಲಯಗಳಿಗೆ ಆರ್ಥಿಕ ನೆರವು

೨೫. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ವಲಯದಲ್ಲಿ ಯಾವ ಯಾವ ಉದ್ದಿಮೆಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ ?

ಆ) ಮೇಲ್ಕಂಡ ಉದ್ದಿಮೆ ವಲಯಗಳಿಗಾಗಿ ಸರ್ಕಾರವು ೧೯೮೯-೯೦ನೇ ಆರ್ಥಿಕ ವರ್ಷದಲ್ಲಿ ನೀಡಿರುವ ಸಾಲ ಮತ್ತು ಸಹಾಯಧನದ ಮೊತ್ತವೆಷ್ಟು ?

ಇ) ಖಾದಿ ಗ್ರಾಮೋದ್ಯೋಗ ವಲಯದ ಉದ್ದಿಮೆಗಳನ್ನು ಜನಪ್ರಿಯಗೊಳಿಸಲು ಸರ್ಕಾರ ದವರು ಕೈಗೊಂಡ ಕ್ರಮಗಳೇನು ?

ಶ್ರೀಮತಿ ಸುಮಾ ವಸಂತ್ (ಸಣ್ಣ ಕೈಗಾರಿಕೆಗಳ ಉಪಸಚಿವೆಯರು).—

ಅ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ವಿವರಗಳು ಕೆಳಕಂಡಂತೆ ಇವೆ.

ಖಾದಿ ಉದ್ದಿಮೆ		ಗ್ರಾಮ ಉದ್ದಿಮೆಗಳು	
ಸಾಲ	ಅನುದಾನ	ಸಾಲ	ಅನುದಾನ
ರೂ. ೯೩,೧೭,೫೦೦-೦೦	ರೂ.೧,೯೦,೦೦೦-೦೦	ರೂ.೪.೦೨,೧೪,೪೦೯.೦೦	ರೂ.೨೩,೭೯,೭೯೦

ಇ) ೧. ದೈನಂದಿನ ವೃತ್ತ ಪತ್ರಿಕೆಗಳಲ್ಲಿ ಕಾಲಕಾಲಕ್ಕೆ ಜಾಹೀರಾತು ನೀಡಲಾಗುತ್ತಿದೆ.

೨. ಆಕಾಶವಾಣಿ – ದೂರದರ್ಶನ ಮೂಲಕ ಪ್ರಚಾರ ಮಾಡಲಾಗುತ್ತಿದೆ.

೩. ವಿವಿಧ ಕೈಗಾರಿಕೆಗಳ ಹಸ್ತ ಪ್ರತಿಗಳನ್ನು ಮುದ್ರಿಸಿ ಉತ್ಸುಕ ಕಸಬುದಾರರಿಗೆ ಹಂಚ ಲಾಗುತ್ತಿದೆ.

೪. ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಖಾದಿ ಮಂಡಳಿಯು ಭಾಗವಹಿಸಿ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ನಿರ್ಶನಿಕ ಪ್ರದರ್ಶನ ಹಾಗೂ ಮಾರಾಟದ ಮೂಲಕ ಪ್ರಚಾರ ಮಾಡಲಾಗುತ್ತಿದೆ.

೫. ಪ್ರತಿ ಜಿಲ್ಲಾ ಮಟ್ಟದಲ್ಲಿ ಒಂದೊಂದು ಜಿಲ್ಲಾ ಕಚೇರಿಗಳಿದ್ದು ಅಲ್ಲಿ ಬರುವ ಉದ್ದಿಮೆ ದಾರರಿಗೆ ಆರ್ಥಿಕ ನೆರವು ಹಾಗೂ ತಾಂತ್ರಿಕ ಮಾರ್ಗದರ್ಶನ ಕೊಡಲಾಗುತ್ತಿದೆ.

೬. ಪ್ರತಿ ತಾಲ್ಲೂಕುಗಳಲ್ಲಿ ಒಂದೊಂದು ತಾಲ್ಲೂಕು ವಿವಿಧೋದ್ದೇಶ ಕಸಬುದಾರರ ಕೈಗಾರಿಕಾ ಸಹಕಾರ ಸಂಘಗಳಿದ್ದು ಅವುಗಳ ಮೂಲಕ ಗ್ರಾಮೀಣ ಕಸಬುದಾರರಿಗೆ ಆರ್ಥಿಕ ಹಾಗೂ ತಾಂತ್ರಿಕ ಸಹಾಯವನ್ನು ಮಾಡಲಾಗುತ್ತಿದೆ.

೭. ಖಾದಿ ಮಾರಾಟದ ಮೇಲೆ ಪ್ರತಿ ಶತ ೨೫ ರಂತೆ ವರ್ಷಪೂರ್ತಿಯಾಗಿ ರಿಬೇಟ್ ನೀಡಲಾಗುವುದು ಹಾಗೂ ವರ್ಷದಲ್ಲಿ ೯೦ ಕೆಲಸದ ದಿನಗಳಲ್ಲಿ ಖಾದಿ ಆಯೋಗವು ನೀಡುವ ರಿಬೇಟಿಗೆ ಅನುಗುಣವಾಗಿ ರಾಜ್ಯ ಸರ್ಕಾರದಿಂದ ಮೂಲಕ ರಿಬೇಟನ್ನು ಖಾದಿ ಕೊಳ್ಳುವ ಗ್ರಾಹಕರಿಗೆ ನೀಡಲಾಗುವುದು.

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಹಾಗೂ ಖಾದಿ ಆಯೋಗದ ವ್ಯಾಪ್ತಿಯಲ್ಲಿ ಬರುವ ಖಾದಿ ಮತ್ತು ಗ್ರಾಮೋದ್ಯೋಗಗಳ ಪಟ್ಟಿ

I ಖಾದಿ

೧. ಅರಳಿ ಖಾದಿ.
೨. ಉಣ್ಣೆ ಖಾದಿ.
೩. ರೇಷ್ಮೆ ಖಾದಿ.
೪. ಮಸ್ಲಿನ್ ಖಾದಿ.

ಗ್ರಾಮೋದ್ಯೋಗಗಳು :

ಖನಿಜಾಧಾರಿತ ಉದ್ದಿಮೆಗಳು

೫. ಸುಣ್ಣದ ಉತ್ಪಾದನೆ.
೬. ಗ್ರಾಮೀಣ ಕುಂಬಾರಿಕೆ.
೭ ಕಲ್ಲು ಒಡೆಯುವುದು, ಕಲ್ಲನ್ನು ಪುಡಿ ಮಾಡುವುದು, ಕಲ್ಲಿನಿಂದ ಕಲಾಕೃತಿಗಳ ಕೆತ್ತನೆ, ವಿಗ್ರಹಗಳ ಕೆತ್ತನೆ.
೮. ಬಳಪದ ಕಲ್ಲಿನಿಂದ ಬಳಸುವ ಪಾತ್ರೆಗಳ ತಯಾರಿಕೆ.
೯. ಬಳಪ, ಸ್ಲೇಟುಗಳ ತಯಾರಿಕೆ.
೧೦. ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಕಲಾತ್ಮಕ ವಸ್ತುಗಳ ತಯಾರಿಕೆ
೧೧. ಪಾತ್ರೆಗಳನ್ನು ತೊಳೆಯುವ ಪುಡಿಗಳ ತಯಾರಿಕೆ.
೧೨. ಸೌದೆಯಿಂದ ಇದ್ದಿಲು ಮಾಡುವುದು.
೧೩. ಚಿನ್ನ, ಬೆಳ್ಳಿ, ಹರಳು, ಚಿಪ್ಪು ಮುಂತಾದವುಗಳಿಂದ ಆಭರಣ ತಯಾರಿಕೆ.
೧೪. ಗುಲಾಲು ಹಾಗೂ ರಂಗೋಲಿಗಳ ತಯಾರಿಕೆ.
೧೫. ಬಳೆಗಳ ತಯಾರಿಕೆ.
೧೬. ಬಣ್ಣಗಳ, ವಾರ್ನಿಷ್‌ಗಳ, ಡಿಸ್ಟೆಂಪರ್‌ಗಳ ತಯಾರಿಕೆ.

II ಅರಣ್ಯಾಧಾರಿತ ಕೈಗಾರಿಕೆಗಳು :

೧೭. ಕೈಕಾಗದ ತಯಾರಿಕೆ.
೧೮. ಕತ್ತಾ ತಯಾರಿಕೆ.
೧೯. ಗೋಂದು ಮತ್ತು ರೆಸಿನ್‌ಗಳ ತಯಾರಿಕೆ.
೨೦. ಗೃಹ ಬೆಂಕಿಕಡ್ಡಿ ತಯಾರಿಕೆ.
೨೧. ಬೆತ್ತ ಮತ್ತು ಬಿದಿರು.
೨೨. ಅಗರಬತ್ತಿ ತಯಾರಿಕೆ.
೨೩. ಕಾಗದದ ದೊನ್ನೆ, ಕಾಗದದ ತಟ್ಟೆ, ಕಾಗದದ ಚೀಲ ಮತ್ತಿತರ ವಸ್ತುಗಳ ತಯಾರಿಕೆ.
೨೪. ಎಕ್ಸರ್‌ಸೈಜ್ ಪುಸ್ತಕಗಳ ತಯಾರಿಕೆ – ಕವರುಗಳ ತಯಾರಿಕೆ – ರಿಜಿಸ್ಟರ್ ತಯಾರಿಕೆ – ರಟ್ಟು ಹಾಕುವುದು ಹಾಗೂ ಕಾಗದದಿಂದ ಲೇಖನ ಸಾಮಗ್ರಿಗಳ ತಯಾರಿಕೆ.
೨೫. ಕಸಪೊರಕೆಗಳು ಹಾಗೂ ತಟ್ಟಿಗಳ ತಯಾರಿಕೆ.
೨೬. ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಪರಿಷ್ಕರಣೆ ಮತ್ತು ಅವುಗಳ ಪ್ಯಾಕಿಂಗ್.
೨೭. ಭಾವಚಿತ್ರಗಳಿಗೆ ಕಟ್ಟು ಹಾಕುವುದು.
೨೮. ಸೆಣಬಿನ ಉತ್ಪನ್ನಗಳ ಉತ್ಪಾದನೆ (ನಾರಿನ ಉದ್ದಿಮೆಯಡಿಯಲ್ಲಿ).

III ವ್ಯವಸಾಧಾಯಾರಿತ ಕೈಗಾರಿಕೆಗಳು :

೨೯. ಏಕದಳ ಹಾಗೂ ದ್ವಿದಳ ಧಾನ್ಯಗಳ ಪರಿಷ್ಕರಣೆ ಉದ್ದಿಮೆ (ಅವಲಕ್ಕಿ ತಯಾರಿಕೆ – ಬ್ರೆಡ್ ಹಾಗೂ ಬೇಕರಿ ಉತ್ಪನ್ನಗಳು. ಮಸಾಲಾ ಪುಡಿಗಳ ತಯಾರಿಕೆ – ಮಂಸುಕಿನ ಜೊಳದ ಅರಳು ಇತ್ಯಾದಿ).

೩೦. ಪನೆಬೆಲ್ಲ.

೩೧. ಬೆಲ್ಲ ಮತ್ತು ಖಂಡಸಾರಿ.

೩೨. ಜೇನು ಕೈಗಾರಿಕೆ.

೩೩. ಹಣ್ಣು ಮತ್ತು ತರಕಾರಿಗಳ ಪರಿಷ್ಕರಣೆ ಹಾಗೂ ಸಂರಕ್ಷಣೆ.

೩೪. ಗಾಣದ ಎಣ್ಣೆ.

೩೫. ನಾರು.

೩೬. ಅರಣ್ಯ ಗಿಡಮೂಲಿಕೆಗಳ ಸಂಗ್ರಹಣೆ.

೩೭. ಬೆಂಡಿನಿಂದ ಚಾಪೆಗಳು, ಹಾರಗಳು ಮುಂತಾದವುಗಳ ತಯಾರಿಕೆ.

೩೮. ಗೋಡಂಬಿ ಪರಿಷ್ಕರಣೆ.

೩೯. ದೊನ್ನೆಗಳ ತಯಾರಿಕೆ.

IV ಪಾಲಿಮರ್ ಮತ್ತು ರಾಸಾಯನಿಕಾಧಾರಿತ ಕೈಗಾರಿಕೆಗಳು :

೪೦. ಪ್ಲಾಸ್ಟಿಕ್‌ನಿಂದ ಪ್ಯಾಕಿಂಗ್ ವಸ್ತುಗಳ ತಯಾರಿಕೆ,

೪೧. ಹಣೆಬೊಟ್ಟುಗಳ ತಯಾರಿಕೆ.

೪೨. ಮೆಹಂದಿ ತಯಾರಿಕೆ.

೪೩. ಅತ್ಯಗತ್ಯ ಎಣ್ಣೆಗಳ ತಯಾರಿಕೆ.

೪೪. ಷಾಂಪೂಗಳ ತಯಾರಿಕೆ.

೪೫. ಕೇಶತೈಲಗಳ ಉತ್ಪಾದನೆ.

೪೬. ಡೆಟರ್‌ಜೆಂಟ್‌ಗಳು ಹಾಗೂ ಬಟ್ಟೆ ಸಾಬೂನುಗಳ ತಯಾರಿಕೆ.

೪೭. ಗಾಲ್ವಾನೀಣ ಚರ್ಮೋದ್ಯೋಗ.

೪೮. ರಬ್ಬರ್.

೪೯. ಅಖಾದ್ಯ ಎಣ್ಣೆ ಹಾಗೂ ಸಾಬೂನು ತಯಾರಿಕೆ.

೫೦. ರೆಕ್ಸಿನ್ ಪಿ.ವಿ.ಸಿ. ಇತ್ಯಾದಿ ಉತ್ಪನ್ನಗಳ ತಯಾರಿಕೆ.

೫೧. ಪ್ರಾಣಿಗಳ ಕೊಂಬು, ಮೂಳೆಗಳಿಂದ ಕಲಾತ್ಮಕ ವಸ್ತುಗಳ ತಯಾರಿಕೆ.

೫೨. ಮೇಣದ ಬತ್ತಿ, ಕರ್ಪೂರ, ಮತ್ತು ಅರಗು ತಯಾರಿಕೆ.

V ಇಂಜಿನಿಯರಿಂಗ್ ಹಾಗೂ ಅಸಾಂಪ್ರದಾಯಿಕ ಶಕ್ತಿ ಬಳಕೆ ;

೫೩. ಬಡಗಿತನ ಹಾಗೂ ಕಮ್ಮಾರಿಕೆ.

೫೪. ಅಲ್ಯೂಮಿನಿಯಂನಿಂದ ಗೃಹೋಪಯೋಗಿ ಪಾತ್ರೆಗಳ ತಯಾರಿಕೆ.

೫೫. ಗೋಬರ್ ಅನಿಲ.

೫೬. ಗುಂಡುಪಿನ್ನುಗಳು, ಕ್ಲಿಪ್ಪುಗಳು, ಸಂರಕ್ಷತಾ ಪಿನ್ನುಗಳು, ಸ್ಟೌವ್ ಪಿನ್ನುಗಳ ತಯಾರಿಕೆ.

೫೭. ಅಲಂಕಾರದ ಬಲ್ಬುಗಳು, ಬಾಟಲುಗಳು, ಗಾಜಿನ ವಸ್ತುಗಳ ತಯಾರಿಕೆ.

೫೮. ಛತ್ರಿಗಳ ಜೋಡಣೆ.

೫೯. ಬಿಸಿಲಿನ ಹಾಗೂ ಗಾಳಿ ಶಕ್ತಿಯ ಉಪಕರಣಗಳು.
೬೦. ಕಂಚಿನಿಂದ ಕೈಯಲ್ಲಿ ತಯಾರಿಸಲಾಗುವ ಗೃಹೋಪಯೋಗಿ ಹಾಗೂ ಇತರೆ ವಸ್ತುಗಳ ತಯಾರಿಕೆ.
೬೧. ಹಿತ್ತಾಳೆಯಿಂದ ತಯಾರಿಸಲಾಗುವ ಗೃಹೋಪಯೋಗಿ ಹಾಗೂ ಇತರೆ ವಸ್ತುಗಳ ತಯಾರಿಕೆ.
೬೨. ತಾಮ್ರದಿಂದ ತಯಾರಿಸಲಾಗುವ ಗೃಹೋಪಯೋಗಿ ಹಾಗೂ ಇತರೆ ವಸ್ತುಗಳ ತಯಾರಿಕೆ.
೬೩. ಹಿತ್ತಾಳೆ, ಕಂಚು, ತಾಮ್ರದಿಂದ ಇತರೆ ವಸ್ತುಗಳ ತಯಾರಿಕೆ.
೬೪. ರೇಡಿಯೋ ತಯಾರಿಕೆ.
೬೫. ಕ್ಯಾಸೆಟ್ ಪ್ಲೇಯರುಗಳ ತಯಾರಿಕೆ (ರೇಡಿಯೋದೊಂದಿಗೆ ಅಳವಡಿಸಿದ ಹಾಗೂ ಅಳವಡಿಸದೇ ಇರುವ).
೬೬. ರೇಡಿಯೋದೊಂದಿಗೆ ಅಳವಡಿಸಿದ ಅಥವಾ ಅಳವಡಿಸದೇ ಇರುವ ಕ್ಯಾಸೆಟ್ ರೆಕಾರ್ಡ್‌ರುಗಳ ಉತ್ಪಾದನೆ.
೬೭. ವೋಲ್ಟೇಜ್ ಸ್ಟೆಬಿಲೈಸರ್ ಉತ್ಪಾದನೆ.
೬೮. ಮರದಿಂದ ಕೆತ್ತನೆ ಮಾಡಿ ತಯಾರಿಸಲಾಗುವ ಫರ್ನೀಚರ್‌ಗಳ ತಯಾರಿಕೆ.
೬೯. ತಗಡಿನ ಡಬ್ಬಗಳ ತಯಾರಿಕೆ.
೭೦. ಮೋಟಾರು ವೈಂಡಿಂಗ್.
೭೧. ಜಾಲರಿ (ವೈರ್‌ನೆಟ್) ತಯಾರಿಕೆ.
೭೨. ಕಬ್ಬಿಣದ ಗ್ರಿಲ್‌ಗಳ ತಯಾರಿಕೆ.
೭೩. ಕೈಗಾಡಿ, ಎತ್ತಿನಗಾಡಿ, ಸಣ್ಣದೋಣಿ, ಬೈಸಿಕಲ್ ಜೋಡಣೆ, ಸೈಕಲ್ ರಿಕ್ಷಾ ಜೋಡಣೆ, ಮೋಟಾರು ಅಳವಡಿಸಿದ ಗಾಡಿಗಳು ಇತ್ಯಾದಿ.
೭೪. ಸಂಗೀತ ಉಪಕರಣಗಳ ತಯಾರಿಕೆ.

VI ಪಸ್ಕೋದ್ಯಮ :

(ಖಾದಿಯನ್ನು ಹೊರತುಪಡಿಸಿ)

೭೫. ಪಾಲಿವಸ್ತ್ರ.
೭೬. ಹೊಸೈರಿ (ಸಿದ್ಧ ಉಡುಪುಗಳು).
೭೭. ಟೈಲರಿಂಗ್ ಹಾಗೂ ಸಿದ್ಧ ಉಡುಪುಗಳ ತಯಾರಿಕೆ.
೭೮. ನೈಲಾನ್ ಹಾಗೂ ಹತ್ತಿಯಿಂದ ಮೀನಿನ ಬಲೆಗಳ ತಯಾರಿಕೆ.
೭೯. ಬಾಟಿಕ್ ಕೆಲಸ
೮೦. ಬೊಂಬೆಗಳು ಮತ್ತು ಆಟದ ಸಾಮಾನುಗಳ ತಯಾರಿಕೆ,
೮೧. ದಾರದ ಉಂಡೆಗಳು ಮತ್ತು ಉಲ್ಲನ್ ಉಂಡೆಗಳ ತಯಾರಿಕೆ,
೮೨. ಎಂಬ್ರಾಯಿಡರಿ.
೮೩. ಶಸ್ತ್ರ ಚಿಕಿತ್ಸೆಯಲ್ಲಿ ಬಳಸಲಾಗುವ ಬ್ಯಾಂಡೇಜುಗಳು.
೮೪. ಸೌವ್ ಬತ್ತಿಗಳ ತಯಾರಿಕೆ.

VII ಸೇವಾ ಉದ್ದಿಮೆಗಳು :

೮೫. ಲಾಂಡ್ರಿ.
೮೬. ಸೆಲೂನ್ ಉದ್ದಿಮೆ.
೮೭. ಪ್ಲಂಬಿಂಗ್.
೮೮. ಎಲೆಕ್ಟ್ರಿಕಲ್ ವೈರಿಂಗ್ – ಗೃಹೋಪಯೋಗಿ ಎಲೆಕ್ಟ್ರಾನಿಕ್ ಉಪಕರಣಗಳ ಹಾಗೂ ಸಾಮಗ್ರಿಗಳ ರಿಪೇರಿ.
೮೯. ಡೀಸೆಲ್ ಇಂಜಿನ್ನುಗಳು ಮತ್ತು ಪಂಪ್‌ಸೆಟ್ಟುಗಳ ರಿಪೇರಿ.
೯೦. ಟೈರ್ ಪಲ್ಕನೈಸಿಂಗ್ ಘಟಕ.
೯೧. ವ್ಯವಸಾಯಕ್ಕೆ ಅಗತ್ಯವಾದ ಸೇವೆಗಳು, ಸ್ಪ್ರೇಯರುಗಳು, ಕ್ರಿಮಿನಾಶಕಗಳು, ಪಂಪು ಸೆಟ್ಟುಗಳು ಮುಂತಾದವುಗಳು.
೯೨. ಬಾಡಿಗೆಗಾಗಿ ಮೈಕ್ರುಗಳು, ಮೈಕ್‌ಸೆಟ್ಟುಗಳು ಅಂತ್ಯಾಕ್ಷರಿಯರುಗಳು ಇತ್ಯಾದಿ.
೯೩. ಬ್ಯಾಟರಿ ಚಾರ್ಜಿಂಗ್
೯೪. ಕಲಾತ್ಮಕ ನಾಮಫಲಕಗಳನ್ನು ತಯಾರಿಸುವುದು.

೯೫. ಸೈಕಲ್ ರಿಪೇರಿ.
೯೬. ಕಟ್ಟಡದ ಕೆಲಸ.

ಹೆಚ್ಚಿನ ವಿವರಗಳಿಗೆ :

ಆಯಾ ಜಿಲ್ಲಾ ಕೇಂದ್ರಗಳಲ್ಲಿರುವ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಯನ್ನು ಸಂಪರ್ಕಿಸಿ.

ಮೈಸೂರು ಆಸಿಟೇಟ್ ಕಂಪನಿಯಲ್ಲಿ ಬಂಡವಾಳ ಹೂಡಿಕೆ

೫೩. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಕೈಗಾರಿಕೆ, ವಾಣಿಜ್ಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ (ಮೈಷುಗರ್) ಕಂಪನಿ ಹೂಡಿರುವ ಬಂಡವಾಳ ಹಾಗೂ ಕೈಗಾರಿಕಾ ಆಸಕ್ತಿಗಳೇನು ?

ಆ) ಮೈಸೂರು ಆಸಿಟೇಟ್ ಕಂಪನಿಗೆ ಒದಗಿಸುತ್ತಿರುವ ರೆಕ್ಟಿಫೈಡ್ ಸ್ಪಿರಿಟಿನ ಪ್ರಮಾಣವೆಷ್ಟು? ಮೈಷುಗರ್ ಕಂಪನಿಯು ಉತ್ಪಾದಿಸುವ ಸ್ಪಿರಿಟ್‌ನ ಪ್ರಮಾಣವೆಷ್ಟು?

ಇ) ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಬಹಿರಂಗ ಮಾರುಕಟ್ಟೆಯಲ್ಲಿ ಸ್ಪಿರಿಟ್ ಖರೀದಿ ನಡೆಸಿದೆಯೇ, ಹಾಗಾದರೆ ಪ್ರತಿ ಲೀಟರ್‌ಗೆ ನೀಡುತ್ತಿರುವ ಹಣವೆಷ್ಟು ?

ಶ್ರೀ ಎಸ್. ಎಂ. ಯಾಹ್ಯ (ವಾಣಿಜ್ಯ ಮತ್ತು ಕೈಗಾರಿಕೆ ಸಚಿವರು).—

ಅ) ಮೈಷುಗರ್ ಸಂಸ್ಥೆಯು ಮೈಸೂರು ಆಸಿಟೇಟ್ ಅಂಡ್ ಕೆಮಿಕಲ್ಸ್ ಸಂಸ್ಥೆಯಲ್ಲಿ ೩೦ ಲಕ್ಷ ರೂ. ಗಳನ್ನು ಮೂಲ ಬಂಡವಾಳವಾಗಿ ತೊಡಗಿಸಿದೆ. ಮೈಸೂರು ಆಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯು, ಮೈಸೂರು ಷುಗರ್ ಕಂಪನಿಯು ತಯಾರಿಸುವ ಆಸಿಟಿಕ್ ಆಸಿಡನ್ನು ಕೊಳ್ಳುವ ಪ್ರಮುಖ ಕಂಪನಿಗಳಲ್ಲಿ ಒಂದಾಗಿದೆ.

ಆ) ಮೈಸೂರು ಷುಗರ್ ಕಂಪನಿ ೧೯೫೯ರಲ್ಲಿ ಉತ್ಪಾದಿಸಿದ ರೆಕ್ಟಿಫೈಡ್ ಸ್ಪಿರಿಟಿನ ಪ್ರಮಾಣ ಹಾಗೂ ಮೈಸೂರು ಆಸಿಟೇಟ್ ಕಂಪನಿಗೆ ಸರಬರಾಜು ಮಾಡಿದ ರೆಕ್ಟಿಫೈಡ್ ಸ್ಪಿರಿಟಿನ ಪ್ರಮಾಣ ಈ ಕೆಳಗಿನಂತಿವೆ.

ವರ್ಷ	ಎಂ.ಎ.ಸಿ.ಸಿ.ಗೆ ಸರಬರಾಜು ಮಾಡಿದ ಪ್ರಮಾಣ	ಮೈಷುಗರ್ ಕಂಪನಿಯು ಉತ್ಪಾದಿಸಿದ ಪ್ರಮಾಣ
ಏಪ್ರಿಲ್ ೧೯೫೯ ರಿಂದ ಮಾರ್ಚ್ ೧೯೬೦ರವರೆಗೆ	೨,೩೯,೪೨೦ಲೀ	೬೧,೩೪,೪೨೪ ಲೀಟರ್

ಇ) ಮೈಸೂರು ಆಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯು ಬಹಿರಂಗ ಮಾರುಕಟ್ಟೆಯಿಂದ ಸ್ಪಿರಿಟನ್ನು ಖರೀದಿಸಿಲ್ಲ.

ಗ್ರಾಮಾಂತರ ವಿದ್ಯುದೀಕರಣ ಯೋಜನೆ

೧೦೫. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ಜಿಲ್ಲೆಯ ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಮಂಜೂರಾದ ಒಟ್ಟು ಹಣದ ಪ್ರಮಾಣವೆಷ್ಟು ?

ಆ) ಇದರಲ್ಲಿ ಯಾವ ಯಾವ ಗ್ರಾಮಗಳಿಗೆ ಎಷ್ಟೆಷ್ಟು ಹಣ ಒದಗಿಸಲಾಗಿದೆ ಹಾಗೂ ಹಣ ಪಡೆದ ಫಲಾನುಭವಿಗಳೆಷ್ಟು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು).—

ಅ) ಯೋಜನೆ ಪ್ರಾರಂಭದಿಂದ ಮಾರ್ಚ್ ೧೯೬೦ರ ಅಂತ್ಯದವರೆಗೆ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳಿಗೆ